ಮೇ: ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ- 1022/2018

ಚಾಸಾ-1 ಪ್ರಾಸಾ-1

| | |
|---|---|
| ಹೆಸರು | ಸವಿತಾ ಸೊನ್ನದ |
| ಗಂಡನ ಹೆಸರು | ಬಸವರಾಜ ಸೊನ್ನದ |
| ವಯಸ್ಸು | 33 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸಸ್ಥಳ | ಆಲಗುಂಡಿ ಬಿಕೆ, ಮುಧೋಳ |

**ದಿನಾಂಕ: 19-10-2022 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಶ್ರೀ. ಎ.ಪಿ.ಪಿ., ರವರಿಂದ :**

ಚಾಸಾ-10 ನನ್ನ ಮಾವ. ಚಾಸಾ-12 ನನ್ನ ಅತ್ತೆ. ಚಾಸಾ-11 ನನ್ನ ಭಾವ. ಚಾಸಾ-8 ನಮ್ಮ ಮನೆಯ ಪಕ್ಕ ಬಾಡಿಗೆಗೆ ಇದ್ದಾರೆ. ಚಾಸಾ-13 ನಮ್ಮ ಮನೆಯ ಮಾಲೀಕರು ಇರುತ್ತಾರೆ. ಚಾಸಾ-2, 3 ರ ಪರಿಚಯವಿದೆ.

ನಮ್ಮ ಊರು ಆಲಗುಂಡಿ ಬಿಕೆ, ಮಕ್ಕಳ ವಿದ್ಯಭ್ಯಾಸದ ಸಲುವಾಗಿ ಚಾಸಾ-13 ರವರ ಮನೆಯಲ್ಲಿ ಸಿದ್ರಾಮೇಶ್ವರ ಕಾಲನಿಯಲ್ಲಿ ಮುಧೋಳದಲ್ಲಿ ವಾಸವಾಗಿದ್ದೇವೆ. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ 3 ಜನ ಮಕ್ಕಳು ಇರುತ್ತೇವೆ. ನಮ್ಮ ಅತ್ತೆ ಮಾವ ಆಲಗುಂಡಿ ಬಿಕೆ ಗ್ರಾಮದಲ್ಲಿ ವಾಸವಾಗಿದ್ದು, ಆಗಾಗ ಹೋಗಿ ಬಂದು ಮಾಡುತ್ತಾರೆ. ನನ್ನ ಗಂಡ ಸೈನ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ.

ದಿ: 08-10-2016 ರಂದು ಮಕ್ಕಳ ಶಾಲೆಗೆ ರಜೆ ಇದ್ದ ಕಾರಣ ನಾನು ಮಕ್ಕಳೊಂದಿಗೆ ಆಲಗುಂಡಿ ಬಿಕೆ ಗ್ರಾಮಕ್ಕೆ ಹೋಗಿದ್ದೆ. ದಿ: 16-10-2016 ರಂದು ಮುಂಜಾನೆ 7 ಗಂಟೆ ಸುಮಾರಿಗೆ ಚಾಸಾ-13 ರವರು ನನಗೆ ಪೋನ ಮಾಡಿ ನನ್ನ ಮತ್ತು ಚಾಸಾ-8 ರವರ ಮನೆಯ ಬಾಗಿಲಿನ ಕೀಲಿ ಮುರಿದಿದೆ ಎಂದು ತಿಳಿಸಿದರು. ಆಗ ನಾನು ಚಾಸಾ-11 ಮತ್ತು ಕರೆಪ್ಪ ಕೂಡಿಕೊಂಡು ಮುಧೋಳ ಸಿದ್ರಾಮೇಶ್ವರ ಕಾಲನಿಗೆ ಬಂದೇವು. ನಮ್ಮ ಮನೆಗೆ ಬಂದು ನೋಡಲಾಗಿ ಮನೆಯ ಬಾಗಿಲಿನ ಕೀಲಿ ಮುರಿದಿತ್ತು. ಒಳಗೆ ಹೋಗಿ ನೋಡಿದಾಗ ನನ್ನ ಮಲಗುವ ಕೋಣೆಯಲ್ಲಿ ಇಟ್ಟಿದ ಸುಟ್ ಕೇಸ ತೆರೆದಿತ್ತು ಮತ್ತು ಅದರಲ್ಲಿ ನೋಡಿದಾಗ ಅದರಲ್ಲಿ ಇಟ್ಟಿದ ಒಂದೂವರೆ ತೊಲೆ ಬಂಗಾರದ ಕಡೆ ಅಂದಾಜು 45,000/- ರೂ. ಕಿಮ್ಮತ್ತಿನದು ಮತ್ತು ಅರ್ಧ ತೊಲೆ ಬಂಗಾರದ ಚೈನು. ಎರಡು ಜೊತೆ ಕಿವಿ ಓಲೆ ಒಟ್ಟು 2 ತೊಲೆಯಷ್ಟು ಬಂಗಾರದ ಆಭರಣ ಕಳುವಾಗಿತ್ತು. ಮತ್ತು ಕೈ ಬೆರಳಿನ ಉಂಗುರ ಮತ್ತು 2 ತಾಯತ ಕಳುವಾಗಿತ್ತು. ಅಡುಗೆ ಮನೆಯಲ್ಲಿ ಹೋಗಿ ನೋಡಿದೆ ಅಲ್ಲಿ ನಾನು ಇಟ್ಟಿದ್ದ 4 ತೊಲೆ ಮಾಂಗಲ್ಯ ಸರ ಕಳುವಾಗಿತ್ತು. ಮತ್ತು ಸುಟ್ ಕೇಸನಲ್ಲಿ ಇಟ್ಟಿದ ರೂ.1,00,000/- ಕಳ್ಳತನವಾಗಿತ್ತು. 2 ತೊಲೆ ಬೆಳ್ಳಿಯ ಉಡದಾರ ಕಳ್ಳತನವಾಗಿತ್ತು. ಚಾಸಾ-8 ರವರ ಮನೆಯಲ್ಲಿ ನೋಡಿದಾಗ ಅವರ ಮನೆಯ ಟ್ರೇಜರಿ ಕೀಲಿ ತೆಗೆದು ಅದರಲ್ಲಿ ಇಟ್ಟಿದ್ದ 2 ತೊಲೆ ಬಂಗಾರ ಮತ್ತು 1 ಲಾಪಟಾಪ ಕಳ್ಳತನಮಾಡಿದ್ದರು. ರೂ.10,000/- ಗಳನ್ನು ಕಳ್ಳತನ ಮಾಡಿದರು.

ಚಾಸಾ-13 ರವರನ್ನು ಈ ವಿಷಯವಾಗಿ ವಿಚಾರಿಸಿದಾಗ ಅವರು ರಾತ್ರಿ ವಾಕಿಂಗ್ ಮಾಡುವಾಗ ಮನೆ ಬಾಗಿಲು ಸರಿಯಾಗಿಯೇ ಇತ್ತು ಎಂದು ಹೇಳಿದರು. ಒಟ್ಟಾರೆ ನನ್ನ ಮನೆಯಲ್ಲಿ 8 ತೊಲೆ ಬಂಗಾರ ಮತ್ತು 1,00,000 ರೂಪಾಯಿ ಕಳುವಾಗಿತ್ತು. ಈ ಬಗ್ಗೆ ನಾನು ಪಿರ್ಯಾದಿಯನ್ನು ನೀಡಿರುತ್ತೇನೆ. ನಾನು ನೀಡಿದ ಪಿರ್ಯಾದಿಯನ್ನು ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿನ ನ್ನನ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಅದೇ ದಿನ ಸಾಯಂಕಾಲ 4 ರಿಂದ 5 ಗಂಟೆ ಸುಮಾರಿಗೆ ಚಾಸಾ2, ಮತ್ತು 3 ಸಮಕ್ಷಮದಲ್ಲಿ ನಾನು ತೋರಿಸಿದ

ಸಿದ್ರಾಮೇಶ್ವರ ಕಾಲನಿಯ ಬಾಡಿಗೆ ಮನೆಯಲ್ಲಿ/ಚಾಸಾ-13 ರ ಮನೆಯಲ್ಲಿ ಪೊಲೀಸರು ಶ್ವಾನದಳ ಕರೆದುಕೊಂಡು ಬಂದು ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ. ಸದರಿ ಪಂಚನಾಮೆ ಸಾಕ್ಷಿಗೆ ತೋರಿಸಲಾಗಿ ಅದನ್ನು ಗುರುತಿಸಿರುತ್ತಾರೆ. ಪಂಚನಾಮೆ ನಿಪಿ-2 ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೊಲೀಸರು ನನ್ನ ಮನೆಯಲ್ಲಿ 2 ಫೋಟೊ ಮತ್ತು ಚಾಸಾ-8 ರ ಮನೆಯಲ್ಲಿ 3 ಫೋಟೋಗಳನ್ನು ತೆಗೆದಿದ್ದು, ಅವುಗಳನ್ನು ನಿಪಿ-3 ರಿಂದ 7 ಎಂದು ಗುರುತಿಸಲಾಯಿತು.

ದಿ: 23-01-2018 ರಂದು ಪೊಲೀಸರು ನ್ನನನ್ನು ಠಾಣೆಗೆ ಕರೆಸಿ ಕಾರ್ಯಲಯದಲ್ಲಿ ದಸ್ತಗಿರ ಆಗಿ ತಮ್ಮ ವಶದಲ್ಲಿರುವ 3 ಜನ ಆರೋಪಿತರನ್ನು ತೋರಿಸಿದರು. ಅವರ ಹೆಸರು ಪ್ರವೀಣ, ಬಸಯ್ಯ ಮತ್ತು ಈರಯ್ಯ ಮಠಪತಿ ಎಂದು ತಿಳಿಸಿದರು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:-**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕೋರಿಕೆಯನ್ನು ರೂ.200/- ದಂಡ ವಿಧಿಸಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.**

ಸಾಕ್ಷಿಯ ಸಹಿ